<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು</u>

**<u>ಸಿ.ಸಿ.ನಂ. 334/2022</u>**

ಸಿ.ಸಿ.ನಂಃ 334/2022

ಸಿಡಬ್ಲು ಃ7 ಪಿಡಬ್ಲೂಃ4

ಸಾಕ್ಷಿದಾರರ ಹೆಸರು : ಬಾಬುಖಾನ್

ತಂದೆಯ ಹೆಸರು : ಮಹಮ್ಮದ್ ಖಾನ್

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತಿ ಎ.ಎಸ್.ಐ

ಸ್ಥಳ : ಗೌರಿಬಿದನೂರು

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 23-06-2026**

**ಮುಖ್ಯ ವಿಚಾರಣೆ ಮಾನ್ಯ : ಶ್ರೀ.ಎಪಿಪಿಯವರಿಂದ :**

ದಿನಾಂಕ **20.06.2016** ರಿಂದ **25.11.2022** ರವರೆಗೆ ಎ.ಎಸ್.ಐ ಆಗಿ ಗೌರಿಬಿದನೂರು ಗ್ರಾಮಾಂತರ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ.

ದಿನಾಂಕ **10.11.2021** ರಂದು ಠಾಣಾ ಪ್ರಭಾರದಲ್ಲಿ ಇದ್ದಾಗ ಚಾ.ಸಾ-**1** ರವರು ಆರೋಪಿ, ಪಂಚನಾಮೆ, ವರದಿ ಹಾಗೂ ಮಾಲನ್ನು ಠಾಣೆಗೆ ತಂದು ಕೊಟ್ಟಿರುತ್ತಾರೆ. ಸದರಿ ವರದಿ ಮೇಲೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಘನ ನ್ಯಾಯಾಲಕ್ಕೆ ಸಲ್ಲಿಸಿರುತ್ತೇನೆ. ಚಾ.ಸಾ-**1** ರವರು ನೀಡಿದ ಮಾಲನ್ನು ಪಿ.ಎಫ್ ನಲ್ಲಿ ಅಳವಡಿಸಿರುತ್ತೇನೆ. ಚಾ.ಸಾ-**2** ರಿಂದ **5** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಕ್ಕೆ ಹಾಜರುಪಡಿಸಿರುತ್ತೇನೆ. ಚಾ.ಸಾ-**1** ರವರಿಂದ **90** ಎಂ.ಎಲ್ ಸಾಮರ್ಥ್ಯದ **89** ಹೈ ವರ್ಡ್ಸ್ ಚೀಯರ್ ವಿಸ್ಕಿ ಟೆಟ್ರಾ ಪ್ಯಾಕ್ ಗಳು, **1** ಪ್ಲಾಸ್ಟಿಕ್ ಚೀಲವನ್ನು ಪಡೆದುಕೊಂಡಿರುತ್ತೇನೆ. ಅದರ ಮೌಲ್ಯ ರೂ. **3,161/-** ಆಗಿರುತ್ತದೆ. ಒಟ್ಟು ಸಾಮರ್ಥ್ಯ **8** ಲೀ **100** ಎಂ.ಎಲ್ ಆಗಿರುತ್ತದೆ. ರಾಸಾಯನಿಕ ಪರೀಕ್ಷೆಗಾಗಿ **1** ಟೆಟ್ರಾ ಪ್ಯಾಕ್ ಅನ್ನು ಎಬಿ ಸೀಲು ಒತ್ತಿ ಕಳುಹಿಸಿಕೊಟ್ಟಿರುತ್ತೇನೆ. ಉಳಿದ **89** ಟೆಟ್ರಾ ಪ್ಯಾಕ್ ಗಳನ್ನು ನ್ಯಾಯಾಲಯದ ಅನುಮತಿ ಪಡೆದು ಅಬಕಾರಿ ಇಲಾಖೆಗೆ ವಾಪಸ್ಸು ನೀಡಿರುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು ಟೆಟ್ರಾ ಪ್ಯಾಕ್ ಅನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಅದನ್ನು ಮು.ಮಾಲು-**2** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾಲು-**1** ನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಸಾಕ್ಷಿಗೆ ಪಿ.ಎಫ್ ಅನ್ನು ತೋರಿಸಲಾಗಿ, ಅದನ್ನು ನಿಪಿ-**4** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**4** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಎಫ್.ಐ. ಆರ್ ಅನ್ನು ತೋರಿಸಲಾಗಿ, ಅದನ್ನು ನಿಪಿ-**5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**5** ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :ಶ್ರೀ. ವಿ.ವಿ.ಕೆ ಆರೋಪಿಪರ ವಕೀಲರಿಂದಃ</u>

ಚಾ.ಸಾ-1 ರವರಿಂದ ಮಾಲು ಹಾಗೂ ಆರೋಪಿಯನ್ನು ಎಷ್ಟು ಗಂಟೆಗೆ ಪಡೆದುಕೊಂಡಿರಿ ಎಂದರೆ ದಿನಾಂಕ 10.11.2021 ಸಂಜೆ 05.00 ಗಂಟೆಗೆ ಪಡೆದುಕೊಂಡಿರುತ್ತೇನೆ.

ಚಾ.ಸಾ-1 ರವರು ಮಾಲನ್ನು ಯಾವ ಬಾರ್ ನಿಂದ ಆರೋಪಿ ತರುತ್ತಿದ್ದರು ಎಂದು ತಿಳಿಸಿದ್ದರಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಕೊಟಾಲದಿನ್ನೆ ಬಾರ್ ನಿಂದ ತರುತ್ತಿದ್ದರು ಎಂದು ಹೇಳಿದರು. ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ತನಿಖೆ ಮಾಡಲು ತೊಂದರೆ ಇತ್ತಾ ಎಂದರೆ ಇರಲಿಲ್ಲ. ಆರೋಪಿ ಯಾವುದೇ ಮಾಲನ್ನು ತರಲಿಲ್ಲ ಆ ರೀತಿ ತಂದಿದ್ದರೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನೂ ಸಹ ಆರೋಪಿಯನ್ನಾಗಿ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಮು.ಮಾಲು-1 ಮತ್ತು 2 ರಲ್ಲಿ ಯಾವ ಬಾರ್ ನಿಂದ ಹಾಗೂ ಗೊಡೌನ್ ಇಂದ ಬಂದಿತ್ತು ಎಂಬ ದಾಖಲಾತಿ ಇರುತ್ತೆ ಎಂದರೆ ಸರಿ. ಆ ವಿಚಾರವಾಗಿ ತನಿಖೆ ಮಾಡಿದ್ದೀರಾ ಎಂದರೆ ಅದು ಅಬಕಾರಿ ಇಲಾಖೆಯವರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಅಬಕಾರಿ ಇಲಾಖೆಯವರಿಂದ ಮಾಹಿತಿಯನ್ನು ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅದು ಅವರಿಗೆ ಸಂಬಂಧಪಟ್ಟಿದ್ದು ಹಾಗಾಗಿ ನಾವು ಸುಮ್ಮನೆ ಇದ್ದೆವು ಎಂದು ನುಡಿಯುತ್ತಾರೆ. ಚಾ.ಸಾ-1 ರವರು ನನಗೆ ಯಾವುದೇ ಮು.ಮಾಲು-1 ನ್ನು ತಂದು ಕೊಡಲಿಲ್ಲ, ಆರೋಪಿಯ ವಿರುದ್ಧ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ವರದಿಯನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

ಓ.ಹೇ.ಕೇ.ಸ. ಇದೆ

ಸಹಿ/-
ಹೆ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು